# ಭಾರತೀಯ ಸಂಸ್ಕೃತಿ ಮತ್ತು ರಾಮಕೃಷ್ಣ ಭಾವಧಾರೆ

**ಸ್ವಾಮಿ ವೀರೇಶಾನಂದ**

ಶ್ರೀರಾಮಕೃಷ್ಣರು ನವಭಾರತದ ಅರುಣೋದಯದ ಹಿನ್ನೆಲೆಯಲ್ಲಿ ಮೂಡಿಬಂದ ಅವತಾರಪುರುಷರು; ಸನಾತನ ಭಾರತದ ದಿವ್ಯ ಆದರ್ಶವನ್ನು ಪುನರುಜ್ಜೀವನಗೊಳಿಸುವ ಮೂಲಕ ಅವರು ಆಧುನಿಕತೆಯ ಹೆಸರಿನಲ್ಲಿ ನಾಸ್ತಿಕತೆ, ಸುಖಲೋಲುಪತೆಯಲ್ಲಿ ಮುಳುಗಿದ್ದ ಭಾರತಕ್ಕೆ ನೂತನ ಸಂದೇಶವನ್ನು ನೀಡಿದರು. ಅವರ ಸಂದೇಶವನ್ನು ಜಗತ್ತಿನೆಲ್ಲೆಡೆ ಹರಡುವ ಮೂಲಕ ಸ್ವಾಮಿ ವಿವೇಕಾ ನಂದು ಭಾರತದ ಸಾಂಸ್ಕೃತಿಕ ಪುನರುತ್ಥಾನದ ಹರಿಕಾರರಾದರು. ಈ ವಿಷಯವನ್ನು ಕುರಿತು ಇಲ್ಲಿ ವಿವರಿಸುವ ಲೇಖಕರು 'ವಿವೇಕಪ್ರಭ'ದ ಹಿಂದಿನ ಸಂಪಾದಕರು; ಪ್ರಸ್ತುತ ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀರಾಮಕೃಷ್ಣರ ಮೇಲಿನ ತಮ್ಮ ಉದ್ಗ್ರಂಥದಲ್ಲಿ ರೊಮಾ ರೊಲಾ ಹೇಳುತ್ತಾರೆ : ''ನಾನು ಯೂರೋಪಿಗೆ, ಅದಕ್ಕೆ ಅರಿವಿಲ್ಲದೆಯೇ, ನೂತನ ವಸಂತನ ಒಂದು ಫಲವನ್ನು ತರುತ್ತಿದ್ದೇನೆ. ಭಾರತದ ಸಂಗೀತಸಮಗ್ರವಾದ (symphony) ಶ್ರೀರಾಮಕೃಷ್ಣ ಎಂಬ ಮಹಾತ್ಮನ ನೂತನ ಸಂದೇಶವೇ ಅದು. ಈ ಸಂಗೀತ ಸಮಗ್ರವು, ಹಿಂದಿನ ಮಹಾಪುರುಷರಂತೆಯೇ ಭೂತಕಾಲದಲ್ಲಿ ಹೊರಹೊಮ್ಮಿದ ನೂರಾರು ಸಂಗೀತಶ್ರುತಿಗಳ ಮೇಲೆ ನಿರ್ಮಿತವಾದುದು. ಆದರೆ ಈ ಸ್ವತಂತ್ರ ವ್ಯಕ್ತಿತ್ವವು ತನ್ನಲ್ಲಿ ಆ ಎಲ್ಲ ಅಂಶಗಳ ವೈವಿಧ್ಯತೆಯನ್ನೂ ಏಕೀಕರಣಗೊಳಿಸಿಗೊಂಡಿದೆ. ಅವುಗಳನ್ನೆಲ್ಲ ಸಮನ್ವಯಗೊಳಿಸಿ, ರಾಜಸಂಗೀತದ ಹೊನಲನ್ನು ಹೊಮ್ಮಿಸಿದೆ. ಅಂಥ ವ್ಯಕ್ತಿತ್ವದ ಹೆಸರಿನಲ್ಲಿಯೇ ಈ ಮಹಾನ್ ರಚನೆಯು ನಮಗೆ ಪ್ರಾಪ್ತವಾಗಿದ್ದರೂ, ಅದು ಹಲವಾರು ಪೀಳಿಗೆಗಳ ಪರಿಶ್ರಮದಿಂದ ಉಂಟಾಗಿರುವುದು ಎನ್ನುವುದನ್ನು ನಾವು ಮರೆಯಬಾರದು. ಆ ಮಹಾಪುರುಷನು ತನ್ನ ವಿಜಯದ ಸಂಕೇತದಿಂದ ನೂತನ ಯುಗವೊಂದರ ಆರಂಭವನ್ನು ಅನಾವರಣ ಮಾಡಿದನು.

''ಯಾವ ಮಹಾತ್ಮನ ಪ್ರತಿಕೃತಿಯನ್ನು ನಾನು ಇಲ್ಲಿ ಆವಾಹಿಸುತ್ತೇನೆಯೋ, ಅವನು ಮೂವತ್ತುಕೋಟಿ ಜನರ ಎರಡು ಸಾವಿರ ವರ್ಷಗಳ ಆಧ್ಯಾತ್ಮಿಕ ಜೀವನದ ಸುಸಂಪನ್ನತೆಯಾಗಿರುವನು. ಅವನು ಮೃತಗೊಂಡು ನಲವತ್ತು ವರ್ಷಗಳಾಗಿದ್ದರೂ, ಅವನ ದಿವ್ಯಾತ್ಮವು ಇಂದಿಗೂ ಆಧುನಿಕ ಭಾರತಕ್ಕೆ ಜೀವವನ್ನು ತುಂಬುತ್ತಿರುವುದು.''

ಈ ಸಂದರ್ಭದಲ್ಲಿ ರಾಜಾಜಿಯವರ ಪ್ರಸಿದ್ಧ ಹೇಳಿಕೆಯನ್ನು ನಾವು ನೆನಪಿನಲ್ಲಿ ಇಡಬೇಕು: ''ಸ್ವಾಮಿ ವಿವೇಕಾನಂದರು ಹಿಂದೂ ಧರ್ಮವನ್ನು ರಕ್ಷಿಸಿದರು ಮತ್ತು ಭಾರತವನ್ನು ಕಾಪಾಡಿದರು. ಅವರಿಲ್ಲದಿದ್ದರೆ, ನಾವು ಧರ್ಮವನ್ನು ಕಳೆದುಕೊಳ್ಳುತ್ತಿದ್ದೆವು ಮತ್ತು ನಮ್ಮ ಸ್ವಾತಂತ್ರ್ಯವನ್ನೂ ಗಳಿಸಿಕೊಳ್ಳುತ್ತಿರಲಿಲ್ಲ. ಆದುದರಿಂದ ಇದೆಲ್ಲದಕ್ಕೂ ನಾವು ಸ್ವಾಮಿ ವಿವೇಕಾನಂದರಿಗೆ ಚಿರಋಣಿಯಾಗಿದ್ದೇವೆ.

## ಸಂಸ್ಕೃತಿ ಎಂದರೇನು?

ಡಿ.ವಿ.ಜಿಯವರು ಹೇಳುವ ಪ್ರಕಾರ ಸಂಸ್ಕಾರ ಎಂಬ ಶಬ್ದವು ಪುರಾತನಕಾಲದಿಂದಲೂ ಪ್ರಯೋಗದಲ್ಲಿದೆ. ಸಂಸ್ಕೃತಿ ಎಂಬ ಶಬ್ದವು ಸಂಸ್ಕಾರಗೊಂಡದ್ದು ಎಂಬ ಅರ್ಥದಲ್ಲಿ ಬರುತ್ತದೆ. ಸಂಸ್ಕಾರಪಡೆದ ಭಾಷೆ 'ಸಂಸ್ಕೃತ'; ಒಳ್ಳೆಯ ವಿದ್ಯಾಸಂಸ್ಕಾರವನ್ನು ಪಡೆದ ಮನುಷ್ಯನು ಸುಸಂಸ್ಕೃತನು. ಸುಸಂಸ್ಕೃತನಾದವನ ಗುಣಸಂಪತ್ತೇ ಸಂಸ್ಕೃತಿ. ಮನುಷ್ಯನ ಗುಣೋತ್ಕೃಷ್ಟತೆಯೇ ಸಂಸ್ಕೃತಿ. ಈ ಪದವು ಇತ್ತೀಚಿನಕಾಲದಲ್ಲಿ ಕಲ್ಚರ್ ಎಂಬ ಇಂಗ್ಲಿಷ್ ಪದಕ್ಕೆ ಸಮಾನಂತರವಾಗಿ ಉಪಯೋಗಿಸಲ್ಪಡುತ್ತಿದೆ. ಈ ಪದದ ಮೂಲಾರ್ಥ, 'ಗೌರವಿಸು', 'ಸೇವಿಸು' 'ನಿಷ್ಠೆಮಾಡು', 'ಲಕ್ಷ್ಯದಲ್ಲಿರಿಸಿಕೋ' ಎಂದು. ಡಿ.ವಿ.ಜಿ.ಯವರು ಹೇಳುವಂತೆ ಇದರಿಂದ ಎರಡು ಅರ್ಥಗಳು ಹೊರಹೊಮ್ಮಿದವು: ೧. ದೈವಭಕ್ತಿ, ವ್ರತದೀಕ್ಷೆ, ಮತಸಿದ್ಧಾಂತ ಇತ್ಯಾದಿ. ೨. ಭೂಮ್ಯಾಸಕ್ತಿ, ಭೂದೇವಿಯ ಆರಾಧನೆ, ಕೃಷಿ, ಉಳುಮೆ ಮುಂತಾದವು. ಅದೇ ಮುಂದೆ ಮನುಷ್ಯನ ಬುದ್ಧಿಯ ವ್ಯವಸಾಯ, ಮನಸ್ಸಿನ ಮೇಲ್ಮೆ, ಅಂತರಂಗದ ಸಂಸ್ಕಾರ ಎಂಬ ಅರ್ಥಗಳನ್ನು ಪಡೆದುಕೊಂಡಿತು. ಮುಂದುವರೆದು ಡಿ.ವಿ.ಜಿ. ಅವರು ಸಂಸ್ಕೃತಿಯ ಸೊಗಸಾದ ವ್ಯಾಖ್ಯಾನವನ್ನು ಹೀಗೆ ನೀಡುತ್ತಾರೆ:

''ಸಂಸ್ಕೃತಿಯೆಂಬುದು ಬರಿಯ ವಿದ್ಯೆಯಲ್ಲ; ಅದು ವಿದ್ಯಾಕುಸುಮಪರಾಗ. ಅದು ಸಾಹಿತ್ಯಪರಾಮರ್ಶೆಯ ಮತ್ತು ಜೀವನಾನುಭವ ವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಲೋಕಸಮಾಧಾನಕಾರಕವಾದ ಶೀಲಸೌಭಾಗ್ಯ. ಅದು ಜೀವನದ ನಾನಾ ವಿಷಯಗಳ, ನಾನಾ ಧ್ಯೇಯಗಳ, ನಾನಾ ತತ್ತ್ವಗಳ, ನಾನಾ ಧರ್ಮಗಳ – ಮೌಲ್ಯತಾರತಾಮ್ಯಜ್ಞಾನದಿಂದಾದ ಸಮನ್ವಯ ಸ್ವಾರಸ್ಯ.'' *(ಸಂಸ್ಕೃತಿ, ೧೦)*

ಡಿ.ವಿ.ಜಿ.ಯವರ ಪ್ರಕಾರ ಸಂಸ್ಕಾರ ಅಥವಾ ಸಂಸ್ಕರಣದಿಂದ ಬರುವುದೇ ಸಮ್ಯಕ್‌ಕರಣ, ಸಮ್ಯಕ್‌ಕೃತಿ ಅಥವಾ ಸಂಸ್ಕೃತಿ. ಅಂದರೆ, ಚೆನ್ನಾಗುವಂತೆ ಮಾಡುವುದು, ಒಳ್ಳೆಯ

ದನ್ನಾಗಿಸುವುದು, ಶುದ್ಧಿಮಾಡಿ ಉತ್ತಮಪಡಿಸುವುದು ಎಂದರ್ಥ. ಇಲ್ಲಿ ಯಾವುದು ಒಳ್ಳೆಯದು? ಯಾವುದರಿಂದ ನಮ್ಮ ಜೀವಿತದ ಪರಮೋದ್ದೇಶದ ಸಿದ್ಧಿಯು ನಮಗೆ ಹತ್ತಿರ ಬರುತ್ತದೆಯೋ ಅದೇ 'ಒಳ್ಳೆಯದು' ಎಂದು ಅವರು ಹೇಳುತ್ತಾರೆ. ಆ ಒಳ್ಳೆಯ ದನ್ನು ಕಂಡುಕೊಳ್ಳುವ ಪ್ರಯತ್ನವೇ, ಹಿತವನ್ನು ಹುಡುಕುವುದೇ ಸಂಸ್ಕೃತಿ.

### ಭಾರತೀಯ ಸಂಸ್ಕೃತಿ ಅಥವಾ ಹಿಂದೂ ಸಂಸ್ಕೃತಿ

ಎರಡು ತತ್ತ್ವಗಳು ಹಿಂದೂಸಂಸ್ಕೃತಿಯ ಅಂತಸ್ಸಾರವೆಂದು ಡಿ.ವಿ.ಜಿ. ಹೇಳುತ್ತಾರೆ. ಒಂದು ಆತ್ಮಪಾರಮ್ಯ; ಎರಡನೆಯದು ಆತ್ಮಸದ್ಗತಿಗೆ ಬಾಧಕವಾಗಿರದ ಸಾಧಕವಾಗಬಲ್ಲಂಥ ಲೋಕ ವ್ಯವಹಾರ. ಇಂಥ ಲೋಕವ್ಯವಹಾರವನ್ನೇ 'ಧರ್ಮ' ಎಂದು ಕರೆಯುವುದು. ಲೋಕದಲ್ಲಿರುವ ಸಮಸ್ತವಸ್ತುಗಳಿಗೂ, ಸಂಬಂಧ ಗಳಿಗೂ ನಾವು ಬೆಲೆಕಟ್ಟುತ್ತೇವೆ. ಹಾಗೆ ಮಾಡುವಾಗ, ನಾವು ಅಂತರಾತ್ಮದೃಷ್ಟಿಯಿಂದ ವಿಚಾರವನ್ನು ಮಾಡಬೇಕು. ನಮ್ಮ ಜೀವನದ ಉದ್ದೇಶಗಳು ಮತ್ತು ಲಕ್ಷ್ಯಗಳು — ಇವುಗಳ ತಾರತಮ್ಯವನ್ನು ಮನಸ್ಸಿನಲ್ಲಿ ನಿಯೋಜಿಸಿಟ್ಟುಕೊಂಡಿರಬೇಕು. ಮೇಲಿನ ಧ್ಯೇಯಕ್ಕೆ ಕೆಳಗಿನ ಧ್ಯೇಯವು ಭಂಗವುಂಟಾಗ ಬಾರದು. ಹೀಗೆ ಜೀವನದಲ್ಲಿ ಗಳಿಸಿಕೊಳ್ಳಬೇಕಾದ ಪುರುಷಾರ್ಥ ಗಳನ್ನು ಸಮನ್ವಯಮಾಡಿಕೊಂಡು ಬಾಳುವುದೇ ಧರ್ಮ. ಇನ್ನು ತತ್ತ್ವವಿಚಾರಕ್ಕೆ ಬಂದರೆ, ಆತ್ಮವಸ್ತುವು ನಾಶವಿಲ್ಲದ್ದು, ಶಾಶ್ವತವಾದದ್ದು. ಈ ಆತ್ಮದ ಅಜ್ಞಾನದಿಂದ ಮನುಷ್ಯನು ಸಂಸಾರಬಂಧನದಲ್ಲಿ ಸಿಲುಕಿದ್ದಾನೆ. ಇದರಿಂದ ಬಿಡಿಸಿಕೊಳ್ಳು ವಷ್ಟು ಸ್ವತಂತ್ರ ನೂತನ ಚೈತನ್ಯ ಅವನಲ್ಲಿ ಯಾವಾಗಲೂ ಅಡ ಗಿರುತ್ತದೆ. ಆತ್ಮಸಂಯಮ, ಆತ್ಮಾನಾತ್ಮ ವಿವೇಕಗಳನ್ನು ಮನು ಷ್ಯನು ಸಂಪಾದಿಸಿಕೊಂಡರೆ, ಜಗತ್ತಿನ ದ್ವಂದ್ವಪಂಜರದಿಂದ ಅವನು ಮೇಲಕ್ಕೆ ಏಳಬಹುದು. ಇದೇ ಶುದ್ಧಾತ್ಮಜ್ಞಾನ, ಆತ್ಮ ಪರಿಪೂರ್ಣತಾ ದರ್ಶನ. ಆಮೇಲೆ ಕ್ರಮೇಣ ಭಗವತ್ಸಾಕ್ಷಾ ತ್ಕಾರ-ಬ್ರಹ್ಮಾನುಭವ. ಅದೇ ಮೋಕ್ಷ ಅಥವಾ ಪ್ರಪಂಚಪಾಶ ಗಳಿಂದ ಬಿಡುಗಡೆ. ಡಿ.ವಿ.ಜಿ.ಯವರ ಅಭಿಪ್ರಾಯದಲ್ಲಿ ಅದೇ ವೇದವೇದಾಂತ ಮತದ ಒಳತಿರುಳು. ಅವರ ಪ್ರಕಾರ ಈ ಜೀವನದೃಷ್ಟಿಯನ್ನು ಮತ್ತು ತತ್ತ್ವಸರಣಿಯನ್ನು ಇಟ್ಟುಕೊಂಡು, ನಮ್ಮ ಜನರು ಸಾವಿರಾರು ವರ್ಷಗಳಿಂದ ಕಟ್ಟಿಕೊಂಡು ಬಂದಿ ರುವ ಜೀವನವಿಧಾನವೇ ಭಾರತೀಯ ಸಂಸ್ಕೃತಿ. *(ಸಂಸ್ಕೃತಿ ಪುಸ್ತಕದ ೨೯-೩೧ ಪುಟಗಳನ್ನು ನೋಡಿ.)*

ಇನ್ನು ಭಾರತೀಯ ಸಂಸ್ಕೃತಿಯ ಹರಿಕಾರರಾದ ಇಬ್ಬರು ಮಹಾನುಭಾವರು ಭಾರತೀಯ ಸಂಸ್ಕೃತಿಯ ಬಗ್ಗೆ ಹೇಳಿರುವ ಉದಾತ್ತವಾದ ವಿಚಾರಗಳನ್ನು ಮನನ ಮಾಡೋಣ. ಅವರಲ್ಲಿ ಒಬ್ಬರು ಮಹರ್ಷಿ ಅರವಿಂದರು. ಇನ್ನೊಬ್ಬರು ಭಾರತೀಯ ಕಲೆಯ ಆಧ್ಯಾತ್ಮಿಕ ಆಯಾಮವನ್ನು ಜಗತ್ತಿಗೆ ತೋರಿಸಿಕೊಟ್ಟ ಶ್ರೀಲಂಕಾ ದೇಶೀಯರಾದ ಆನಂದ ಕುಮಾರಸ್ವಾಮಿ ಅವರು.

ಮಹರ್ಷಿ ಅರವಿಂದರು 'Foundations of Indian Civilization' ಎಂಬ ಪುಸ್ತಕವನ್ನು ಬರೆದಿದ್ದಾರೆ. ಇದರಲ್ಲಿ ಸಂಸ್ಕೃತಿಯ ಕಾರ್ಯವನ್ನು ಅವರು ಸ್ಪಷ್ಟವಾಗಿ ಹೇಳುತ್ತಾರೆ. ಸಂಸ್ಕೃತಿಯ ಮೌಲ್ಯವು ಅದು ದೇಹ, ಮನಸ್ಸು ಮತ್ತು ಆತ್ಮಗಳ ಸಮನ್ವಯವನ್ನು ಉತ್ತೇಜಿಸುವುದರಲ್ಲಿಯೇ ಇದೆ. ಹಾಗೆಯೇ ಒಂದು ನಾಗರಿಕತೆಯ ಮಾಪನವನ್ನು ನಾವು ಮಾಡಬೇಕಾ ಗಿರುವುದು ಆ ಸಮನ್ವಯವನ್ನು ಆ ನಿರ್ದಿಷ್ಟ ನಾಗರಿಕತೆಯು ತನ್ನ ಮೂಲಭೂತ ಭಾವನೆಗಳಲ್ಲಿ ಮತ್ತು ಜೀವನದ ವಿಧಾನ ಗಳಲ್ಲಿ ಹೇಗೆತಾನೇ ವ್ಯಕ್ತಪಡಿಸುತ್ತಿದೆ ಎನ್ನುವ ಅಂಶದಲ್ಲಿ.

**ಸಂಸ್ಕೃತಿಯಲ್ಲಿ ಎರಡು ವಿಧ:** ಭೌತಿಕ ಮತ್ತು ಆಧ್ಯಾತ್ಮಿಕ. ಪಾಶ್ಚಾತ್ಯ ಸಂಸ್ಕೃತಿಯು ಐಹಿಕ ಸಂಪತ್ತನ್ನು ಮುಖ್ಯವಾಗಿ ಇಟ್ಟು ಕೊಂಡಿರುವ ಸಂಸ್ಕೃತಿ. ಭಾರತೀಯ ಸಂಸ್ಕೃತಿಯು ಮುಖ್ಯ ವಾಗಿ ಆಧ್ಯಾತ್ಮಿಕ ಸಂಸ್ಕೃತಿ. ಮಾನವತೆಯ ಭವಿಷ್ಯದ ಆಶೋ ತ್ತರಗಳು ಯಾಂತ್ರಿಕವಾದ, ಕೊಳ್ಳುಬಾಕತನದ ಸಮಾಜವಾಗುವು ದರ ಮೇಲೆ ಅವಲಂಬಿತವಾಗಿವೆಯೋ, ಇಲ್ಲವೇ ಆಧ್ಯಾತ್ಮಿಕ, ಅತೀಂದ್ರಿಯ ಮತ್ತು ಧಾರ್ಮಿಕ ನಾಗರಿಕತೆಯಾಗುವುದರ ಮೇಲೆ ಆಧಾರಿತವಾಗಿದೆಯೋ ಎಂಬ ಪ್ರಶ್ನೆಯನ್ನು ಇದು ಒಡ್ಡುತ್ತದೆ.

ಸಂಸ್ಕೃತಿಯ ಎಲ್ಲ ಅಂಶಗಳೂ ಜೀವಿಯೊಬ್ಬನನ್ನು ಉನ್ನತ ಆಧ್ಯಾತ್ಮಿಕ ಸ್ತರಗಳಿಗೆ ಕರೆದುಕೊಂಡು ಹೋಗುವ ಉದ್ದೇಶವನ್ನೇ ಹೊಂದಿವೆ.

ಈ ವಿಷಯದಲ್ಲಿ ಅರವಿಂದರ ಅಭಿಪ್ರಾಯವು ಬಹಳ ಸ್ಪಷ್ಟವಾಗಿದೆ. ಅವರು ಮಾನವ ಅಭಿವೃದ್ಧಿಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಕೊಡುಗೆಯನ್ನೇನೂ ಅಲ್ಲಗಳೆಯುವುದಿಲ್ಲ. ಆದರೆ, ಭಾರತೀಯ ಆಧ್ಯಾತ್ಮಿಕ ಸಂಪ್ರದಾಯಗಳು ಇಡೀ ಮಾನವ ತೆಯ ಐಕ್ಯತೆಯನ್ನು ಸಾಧಿಸುವಲ್ಲಿ ಇಡೀ ಜಗತ್ತನ್ನು ಪ್ರೇರೇ ಪಿಸುತ್ತವೆ ಎಂದು ಅವರು ವಾದಿಸುತ್ತಾರೆ. ಇದು ವಿಶ್ವಾತ್ಮಕವಾದ ದಿವ್ಯಚೈತನ್ಯದ ಜ್ಞಾನದಿಂದ ಮಾತ್ರ ಲಭಿಸುವಂಥದ್ದು. ಈ ಉದಾತ್ತ ಧ್ಯೇಯವನ್ನು ಭಾರತವು ಸಾಕಾರಗೊಳಿಸಿಕೊಳ್ಳಬೇಕಾ ದರೆ, ಭಾರತವು ತನ್ನ ಆಧ್ಯಾತ್ಮಿಕ ಸಂಪ್ರದಾಯಗಳು ಹಾಕಿಕೊಟ್ಟ ಪರಮೋಚ್ಚ ಆದರ್ಶಗಳನ್ನು ಪ್ರಾಯೋಗಿಕವಾಗಿ ಆಚರಣೆಗೆ ತರ ಬೇಕು. ಆ ಮೂಲಕ ಭಾರತವು ವಿದೇಶೀ ಭಾವನೆಗಳ ಆಕ್ರಮಣ ದ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು.

ಆನಂದ ಕುಮಾರಸ್ವಾಮಿ ಅವರು 'Dance of Shiva' ಎಂಬ ಸೊಗಸಾದ ಪುಸ್ತಕವನ್ನು ಬರೆದಿದ್ದಾರೆ. ಅದರ ಮೊದಲ ಅಧ್ಯಾಯದಲ್ಲಿ, 'ಮಾನವತೆಯ ಕಲ್ಯಾಣಕ್ಕೆ ಭಾರತವು ಏನನ್ನು ತಾನೇ ಕೊಡುಗೆಯನ್ನು ನೀಡಬಲ್ಲುದು?' ಎಂಬ ವಿಷಯದ ಬಗ್ಗೆ ಚರ್ಚಿಸುತ್ತಾರೆ. ಅದರಲ್ಲಿ ಅವರು ಹೀಗೆ ಹೇಳುತ್ತಾರೆ: "ಭಾರತದ ಪ್ರಮುಖ ಕೊಡುಗೆಯೆಂದರೆ ಭಾರತತ್ವ ಎನ್ನು

ವುದು.... ಭಾರತೀಯ ಅನುಭವದ ಹೃದಯ ಮತ್ತು ಸಾರ ವೆಂದರೆ ಅಖಂಡ ಮಾನವಜೀವಿತದ ಐಕ್ಯತೆಯ ಅತೀಂದ್ರಿಯ ಅನುಭೂತಿ ಮತ್ತು ಈ ಐಕ್ಯತೆಯ ಪರಿಜ್ಞಾನವು ಪಾರಮಾರ್ಥಿಕ ಶ್ರೇಯಸ್ಸು ಮತ್ತು ಅತ್ಯುನ್ನತ ಸ್ವಾತಂತ್ರ್ಯವನ್ನು ತಂದುಕೊಡು ವುದು ಎನ್ನುವುದರಲ್ಲಿ ಸ್ವಾಭಾವಿಕವಾದ ಮತ್ತು ಅಳಿಸಲಾಗದ ನಿಶ್ಚಯಭಾವನೆ... ಭಾರತವು ಜಗತ್ತಿಗೆ ನೀಡುವ ಕೊಡುಗೆ ಯೆಲ್ಲವೂ ಅದರ ತತ್ತ್ವಶಾಸ್ತ್ರದಲ್ಲಿ ಸಮ್ಮಿಳಿತವಾಗಿದೆ.''

### ಭಗವಂತನನ್ನು ಅರಸುವುದೇ ಭಾರತೀಯ ಸಂಸ್ಕೃತಿಯ ಜೀವಾಳ

ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕ ಸಂಸ್ಕೃತಿ ಎನ್ನುವ ಅಂಶವನ್ನು ನಾವು ಮನಗಾಣಿಸಿಕೊಂಡೆವು. ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ಸಾರದಾನಂದಜಿ ಅವರು ತಮ್ಮ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ವೆಂಬ ಉದ್ಗ್ರಂಥದಲ್ಲಿ ಇದನ್ನೇ ಇನ್ನೂ ತಿಳಿಯಾಗಿ ನಮಗೆ ತಿಳಿಸಿಕೊಡುತ್ತಾರೆ. ಈ ಗ್ರಂಥದ ಉಪೋದ್ಘಾತದಲ್ಲಿ ಅವರು ಆಧ್ಯಾತ್ಮಿಕತೆಯೇ ಭಾರತ ಜೀವಿತದ ಒರೆಗಲ್ಲು ಎನ್ನುತ್ತಾರೆ. ಪ್ರಾಚೀನಕಾಲದಿಂದಲೂ ಭಾರತವರ್ಷ ವು ಇಂದ್ರಿಯಾತೀತ ತತ್ತ್ವಗಳಾದ ಭಗವಂತ, ಆತ್ಮ, ಪರಲೋಕ ಮುಂತಾದವುಗಳು ಸತ್ಯವಾದುವು ಎಂದೇ ನಂಬಿಕೊಂಡಿದೆ. ಹಾಗೂ ಭಾರತೀಯ ಸಂಸ್ಕೃತಿಯು ಈ ನಿತ್ಯತತ್ತ್ವಗಳ ಸಾಕ್ಷಾ ತ್ಕಾರ ಅಥವಾ ಅಪರೋಕ್ಷಜ್ಞಾನದತ್ತ ಇಡೀ ಮಾನವತೆಯನ್ನು ಕರೆದೊಯ್ಯುವ ಉದ್ದೇಶವನ್ನು ಹೊಂದಿದೆ. ಇದೇ ಭಾರತೀಯ ಸಮಷ್ಟಿ ಜೀವನದ ಮತ್ತು ವೈಯಕ್ತಿಕ ಸಾಧನೆಯ ಚರಮ ಲಕ್ಷ್ಯವಾಗಿದೆ. ಈ ರೀತಿಯಲ್ಲಿ ಯುಗಯುಗಗಳಿಂದಲೂ ಭಾರ ತೀಯ ಜೀವನದ ಎಲ್ಲ ಚಟುವಟಿಕೆಗಳೂ ಉತ್ಕಟ ಆಧ್ಯಾತ್ಮಿಕತೆ ಯಿಂದಲೇ ರಂಜಿತವಾಗಿವೆ.


ಅತೀಂದ್ರಿಯ ವಸ್ತುಗಳು ಮತ್ತು ಅನುಭವಗಳಲ್ಲಿ ಈ ಬಗೆಯ ಆಸಕ್ತಿಗೆ ಕಾರಣ ಅಪರೋಕ್ಷ ಜ್ಞಾನವನ್ನು ಮತ್ತು ದಿವ್ಯಗುಣಗಳನ್ನು ಹೊಂದಿರುವ ಮಹಾನುಭಾವರು ಈ ಭರತ ಭೂಮಿಯಲ್ಲಿ ಜನಿಸಿರುವುದು. ಭಗವತ್ಸಾಕ್ಷಾತ್ಕಾರವೇ ಭಾರತ ಜೀವಿತದ ಮುಖ್ಯಸಾರಭೂತ ಅಂಶವಾಗಿದೆ. ಅದೇ ಭಾರತ ಸಂಸ್ಕೃತಿಯ ಜೀವಾಳ. ಇದಕ್ಕೆ ಜೀವವನ್ನು ತುಂಬಿರುವವರು ಋಷಿಗಳು, ಆಪ್ತರು, ಅಧಿಕಾರಿಗಳು ಮತ್ತು ಪ್ರಕೃತಿಲೀನ ಪುರುಷರು ಎಂಬ ಸ್ತರಗಳಲ್ಲಿ ಗುರುತಿಸಿಕೊಳ್ಳುವ ಮಹಾತ್ಮರು. ಇವರು ವೈದಿಕಕಾಲದಿಂದಲೂ ಧರ್ಮವನ್ನು ಪುನರುತ್ಥಾಪಿಸುವ ಅಮೋಘ ಕಾರ್ಯವನ್ನು ಮಾಡುತ್ತಿದ್ದಾರೆ.

ಈ ಮಹಾತ್ಮರಲ್ಲಿಯೇ ಕೆಲವರು ಜಗದ್ಗುರುಗಳೆಂದು ಕರೆಸಿ ಕೊಂಡರು; ಇವರುಗಳಲ್ಲಿಯೇ ಕೆಲವು ಮಹೋತ್ತಮ ಮಹಾತ್ಮ ರನ್ನು ಜನರು ಅವತಾರ ಪುರುಷರೆಂದು ಕರೆದು ಆರಾಧಿಸಿದರು. ಈ ಅವತಾರಪುರುಷರು ಧರ್ಮಕ್ಕೆ ಹೊಸ ರೂಪವನ್ನು ನೀಡಿರು ವುದನ್ನು ನೋಡುತ್ತೇವೆ. ಅವತಾರ ಪುರುಷರು ಶಾಸ್ತ್ರಗಳ ಆದರ್ಶ ವನ್ನು ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡಿರುವುದಲ್ಲದೆ, ಆಧ್ಯಾತ್ಮಿಕ ಶಕ್ತಿಯ ಮಹಾ ಆಗರವಾಗಿದ್ದಾರೆ. ಹೀಗೆಂದೇ ಅವರು ಯುಗಪರಿವರ್ತಕರಾಗಿದ್ದಾರೆ.

ಈ ಆಧುನಿಕ ಯುಗದಲ್ಲಿಯೂ ಅವತಾರಗಳ ಅವತರಣ ವಾಗುವುದು. ಜಗದ್ಗುರುಗಳಾದ ಅವರು ಅಧರ್ಮವು ಮೇಲುಗೈ ಹೊಂದಿ, ಧರ್ಮದ ಅಧಃಪತನವಾದಾಗಲೆಲ್ಲ ಅವತರಿಸಿ ಬರು ತ್ತಾರೆ. ಭಾರತದ ಪುಣ್ಯಭೂಮಿಯು ಅಂಥ ಯುಗಾವತಾರ ಗಳು ಜನ್ಮವೆತ್ತುವ ನೆಲೆವೀಡಾಗಿದೆ. ಈ ಸರಣಿಯಲ್ಲಿಯೇ ಆಧುನಿಕ ಯುಗದಲ್ಲಿ ಧರ್ಮಸಂಸ್ಥಾಪನೆಯನ್ನು ಮಾಡಲು ಹುಟ್ಟಿಬಂದವರು ಶ್ರೀರಾಮಕೃಷ್ಣ ಪರಮಹಂಸರು.

### ಶ್ರೀರಾಮಕೃಷ್ಣರು ಮತ್ತು ಭಾರತೀಯ ಸಂಸ್ಕೃತಿ

ರಾಮಕೃಷ್ಣ ಭಾವಧಾರೆಯ ಮೂರ್ತರೂಪರು ಶ್ರೀರಾಮ ಕೃಷ್ಣರು. ಅವರ ಜೀವಿತ, ಆಧ್ಯಾತ್ಮಿಕ ದರ್ಶನ ಮತ್ತು ಸಿದ್ಧಿಗಳು ಹಾಗೂ ಉಪದೇಶಗಳೇ ಮುಂದೆ ರಾಮಕೃಷ್ಣಭಾವಧಾರೆ ಎನ್ನುವ ವಿಚಾರಧಾರೆಯ ಸ್ವರೂಪವನ್ನು ಪಡೆದುಕೊಂಡವು. ನಾವು ಯಾವುದನ್ನು ಭಾರತೀಯ ಸಂಸ್ಕೃತಿ ಎನ್ನುತ್ತೇವೆಯೋ, ಅದು ಹಿಂದೂ ಸಂಸ್ಕೃತಿಯೇ ಆಗಿದೆ. ವೈದಿಕಕಾಲದಿಂದ ಇಂದಿನ ವರೆಗೂ ಉಳಿದು, ಬೆಳೆದು, ಇನ್ನೂ ಜಾಜ್ವಲ್ಯಮಾನವಾಗಿ ಬೆಳಗು ತ್ತಿರುವ ಸಂಸ್ಕೃತಿಯೇ ಇದು. ಈ ಸಂಸ್ಕೃತಿಯ ಪರಿಶುದ್ಧ ಅಭಿ





ಗಾರ ರೊಮಾ ರೊಲಾ ಹೇಳುವಂತೆ, ಸಹಸ್ರವರ್ಷಗಳ ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನು ಐವತ್ತು ವರ್ಷಗಳ ತಮ್ಮ ಜೀವಿತಾವಧಿಯಲ್ಲಿ ಬಾಳಿಬದುಕಿದವರು ಶ್ರೀರಾಮಕೃಷ್ಣರು. ಶ್ರೀರಾಮಕೃಷ್ಣರು ಮತ್ತು ಭಾರತೀಯ ಅಥವಾ ಹಿಂದೂ ಸಂಸ್ಕೃತಿಯ ನಡುವಣ ಇರುವ ಈ ಅವಿನಾಭಾವ ಸಂಬಂಧವನ್ನು ಎತ್ತಿತೋರಿಸಿದವರು ಬೇರೆ ಯಾರೂ ಅಲ್ಲ, ಸ್ವತಃ ಅವರ ಕರಕಮಲಸಂಜಾತರಾದ ಸ್ವಾಮಿ ವಿವೇಕಾನಂದರು. ಅವರು **'ಹಿಂದೂಧರ್ಮ ಮತ್ತು ಶ್ರೀರಾಮಕೃಷ್ಣರು'** ಎಂಬ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಅವರು ಹೀಗೆ ಹೇಳುತ್ತಾರೆ:

''ಜ್ಞಾನಕಾಂಡ ಮತ್ತು ವೇದಾಂತವು ಮಾತ್ರವೇ ಸರ್ವಕಾಲಗಳಲ್ಲೂ ಮಾನ್ಯತೆಯನ್ನು ಪಡೆದಿದೆ. ಏಕೆಂದರೆ ಅದು ಮಾತ್ರವೇ ಯೋಗ, ಭಕ್ತಿ, ಜ್ಞಾನ, ಕರ್ಮ ಇವುಗಳ ಅಭ್ಯಾಸದ ಮೂಲಕ ಜನರನ್ನು ಮಾಯೆಯಿಂದ ಪಾರುಮಾಡಿ ಅವರಿಗೆ ಮುಕ್ತಿಯನ್ನು ದೊರಕಿಸಿಕೊಡುತ್ತದೆ...ಆದರೆ ಕಾಲವಶದಿಂದ ಸದಾಚಾರ ಭ್ರಷ್ಟರೂ ವೈರಾಗ್ಯಹೀನರೂ ಏಕಮಾತ್ರಲೋಕಾಚಾರನಿಷ್ಠರೂ ಕ್ಷೀಣಬುದ್ಧಿಯುತರೂ ಆದ ಆರ್ಯಸಂತಾನರು ವೇದಾಂತದ ಗಹನ ತತ್ತ್ವಗಳನ್ನು ಅಲ್ಪಮತಿಗಳಿಗಾಗಿ ಸ್ಥೂಲ ಭಾಷೆಯಲ್ಲಿ ವಿವರಿಸುವ ಮತ್ತು ಆಧ್ಯಾತ್ಮಿಕ ಆದರ್ಶಕ್ಕೆ ಸಂಬಂಧಿಸಿದ ವಿಶೇಷಾಂಶಗಳಿಗೆ ಮಾತ್ರ ಪ್ರಾಧಾನ್ಯ ನೀಡುವುದರಿಂದ ಮೇಲುನೋಟಕ್ಕೆ ಪರಸ್ಪರ ವಿರೋಧಿಗಳೆಂದು ಕಂಡುಬರುವ ಪುರಾಣಾದಿಗಳ ನಿಜವಾದ ಭಾವವನ್ನು ಗ್ರಹಿಸಲು ಅಸಮರ್ಥರಾದರು. ಇದರ ಪರಿಣಾಮವಾಗಿ ವೇದಗಳ ಸನಾತನ ಧರ್ಮವನ್ನು ಛಿದ್ರಛಿದ್ರಗೊಳಿಸಿ ಸುಂದರ ಧರ್ಮಭೂಮಿಯಾದ ಭಾರತವನ್ನು ಗೊಂದಲಗಳ ರಾಶಿಯನ್ನಾಗಿ ಪರಿವರ್ತಿಸಿದರು ... ಇಂತಹ ಪರಿಸ್ಥಿತಿಯಲ್ಲಿ ಆರ್ಯಜನಾಂಗದ ನಿಜವಾದ ಧರ್ಮ ಯಾವುದು ಎಂಬುದನ್ನು ತೋರಿಸಲು, ತನ್ನ ನೆನಪಿಗೂ ನಿಲುಕದಷ್ಟು ಪುರಾತನವಾದ ಇತಿಹಾಸದ ಅವಧಿಯಲ್ಲಿ ಈ ನಾಡಿನಗಲದಲ್ಲೆಲ್ಲ ಹರಡಿಹೋಗಿದ್ದ ತನ್ನ ಅನೇಕ ಶಾಖೋಪಶಾಖೆಗಳ ನಡುವೆಯೂ ಹಿಂದೂಧರ್ಮದ ನಿಜವಾದ ಐಕ್ಯತೆ ಎಲ್ಲಿದೆ ಎಂದು ತೋರಿಸುವುದಕ್ಕೂ ಭಗವಾನ್ ಶ್ರೀರಾಮಕೃಷ್ಣರು ಭಾರತದಲ್ಲಿ ಅವತರಿಸಿದರು... ಎಲ್ಲಕ್ಕಿಂತ ಹೆಚ್ಚಾಗಿ, ಸನಾತನ ಧರ್ಮದ ಜೀವಂತಮೂರ್ತಿಯಾದ ಅವರು ತಮ್ಮ ಅದ್ಭುತ ಜೀವನದ ಮೂಲಕ ಈ ಧರ್ಮದ ವಿಶ್ವವಿಶಾಲತೆಯನ್ನು ತೋರಿಸಿದರು. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೫: ೩೮೪-೩೮೫)*

ಸ್ವಾಮಿ ವಿವೇಕಾನಂದರು ಮುಂದುವರೆದು, ಸನಾತನ ಧರ್ಮದ ಅವನತಿಯ ಬಗ್ಗೆ ಹೇಳುತ್ತಾರೆ. ಜನರು ಸಣ್ಣಸಣ್ಣ ಪಂಥಗಳಲ್ಲಿ ಆಂಶಿಕವಾಗಿ ಚದುರಿಹೋಗಿದ್ದಾರೆ. ಅಲ್ಲಲ್ಲಿ ಚೆದುರಿಹೋಗಿದ್ದ, ಪರಸ್ಪರ ಸಂಬಂಧಗಳನ್ನು ಕಳೆದುಕೊಂಡಿದ್ದ ಆಧ್ಯಾತ್ಮಿಕ ಆದರ್ಶಗಳನ್ನು ಗುರುತಿಸಿ, ಈ ಹೊಸ ಆಧ್ಯಾತ್ಮಿಕ ಪುನರುಜ್ಜೀವನದಿಂದ ಶಕ್ತಿಯನ್ನು ಪಡೆದ ಜನರು ಅವುಗಳನ್ನು ಅರ್ಥಮಾಡಿಕೊಂಡು, ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಸಮರ್ಥರಾಗುತ್ತಾರೆ; ಕಳೆದುಹೋಗಿರುವ ಆದರ್ಶಗಳನ್ನು ಪುನಃ ಕಂಡುಕೊಳ್ಳಲು ಶಕ್ತರಾಗುತ್ತಾರೆ; ಇದಲ್ಲದೆ ಭವಿಷ್ಯವು ಉಜ್ವಲವಾದದ್ದು ಎಂಬುದನ್ನು ಖಂಡಿತವಾಗಿ ಸಾಧಿಸಿ ತೋರಿಸುವುದಕ್ಕಾಗಿ ದಯಾಪೂರ್ಣನಾದ ಭಗವಂತನು ಈ ಯುಗದಲ್ಲಿ ಅವತರಿಸಿದ್ದಾನೆ. ಸ್ವಾಮಿ ವಿವೇಕಾನಂದರು ಹೇಳುವಂತೆ ಶ್ರೀರಾಮಕೃಷ್ಣರ ಅವತಾರವು ಎಲ್ಲ ಆದರ್ಶಗಳನ್ನು ಸಮನ್ವಯಗೊಳಿಸುವುದರಲ್ಲಿಯೂ, ಎಲ್ಲ ರೀತಿಯ ಆಧ್ಯಾತ್ಮಿಕ ಸಂಸ್ಕೃತಿಗಳಿಗೆ ಉತ್ತೇಜನ ನೀಡುವುದರಲ್ಲಿಯೂ ಎಲ್ಲ ಅವತಾರಗಳನ್ನೂ ಖಚಿತವಾಗಿಯೂ ಮೀರಿ ನಿಂತಿದೆ. ಶ್ರೀರಾಮಕೃಷ್ಣರ ಅವತರಣದ ಮೂಲಕ ಈ ನವಯುಗ ಧರ್ಮವು ಸಮಗ್ರ ಜಗತ್ತಿನ, ಅದರಲ್ಲಿಯೂ ಭಾರತ ವರ್ಷದ ಕಲ್ಯಾಣಮಾರ್ಗವಾಗಿರುವುದು.

ಇಷ್ಟನ್ನು ಹೇಳಿ, ಸ್ವಾಮಿ ವಿವೇಕಾನಂದರು ಇಡೀ ಮಾನವತೆಗೆ ಕರೆನೀಡುತ್ತಾರೆ: ''ಈ ನವಯುಗ ಧರ್ಮಪ್ರವರ್ತಕನಾದ ಭಗವಾನ್ ಶ್ರೀರಾಮಕೃಷ್ಣರು ಹಿಂದೆ ಅವತರಿಸಿದ ಯುಗ ಧರ್ಮ ಪ್ರವರ್ತಕ ಸಮೂಹದ ಪುನಃ ಸಂಸ್ಕೃತ ಮಹಾ ಪ್ರಕಾಶವಾಗಿರುತ್ತಾನೆ. ಹೇ ಮಾನವ, ಇದನ್ನು ನಂಬು; ನಂಬಿ ಬಾಳು!''

## ಶ್ರೀರಾಮಕೃಷ್ಣರು ಮತ್ತು ವೇದೋಪನಿಷತ್ತುಗಳ ಸಂಸ್ಕೃತಿ

ವೇದಗಳು ಮತ್ತು ನಂತರ ಉಗಮಿಸಿದ ಉಪನಿಷತ್ತುಗಳು ಭಾರತೀಯ ಸಂಸ್ಕೃತಿಯ ಸ್ರೋತಗಳೆಂದು ಗುರುತಿಸಲ್ಪಡುತ್ತವೆ.

ಭಾರತದ ಮಾನಸವು ರಚಿತವಾದದ್ದು ವೇದಗಳ ಕಾಲದಲ್ಲಿಯೇ. ಈ ಸಾಂಸ್ಕೃತಿಕ ಧಾರೆಯೂ ಇಂದಿಗೂ ನೂರಾರು, ಸಾವಿರಾರು ಕವಲುಗಳ ಮೂಲಕ ಹರಿದುಬರುತ್ತಿದೆ.ವೇದಗಳು ಪ್ರತಿಪಾದಿಸುವ ಮೂಲಭೂತ ಭಾವನೆಯು ಋಗ್ವೇದದ ಒಂದು ಮಂತ್ರದಲ್ಲಿ ಸೊಗಸಾಗಿ ನಿರೂಪಿತವಾಗಿದೆ: **'ಏಕಂ ಸತ್ ವಿಪ್ರಾ ಬಹುಧಾ ವದಂತಿ'** – ಸತ್ಯವು ಒಂದೇ, ಆದರೆ ತಿಳಿದವರು ಅದನ್ನು ಬೇರೆ ಬೇರೆ ರೀತಿಯಲ್ಲಿ ಬಣ್ಣಿಸುತ್ತಾರೆ. ಸತ್ಯವು ಒಂದೇ ರೀತಿಯಲ್ಲಿ ಅಭಿವ್ಯಕ್ತವಾಗುವುದು ಎನ್ನುವ ಸಂಕುಚಿತ ಮನೋಭಾವವನ್ನು ಐದುಸಾವಿರ ವರ್ಷಗಳ ಹಿಂದೆಯೇ ನಿರಾಕರಿಸಿರುವ ಸಂಸ್ಕೃತಿ ಭಾರತೀಯ ಸಂಸ್ಕೃತಿ. ಇದನ್ನು ಈ ಆಧುನಿಕ ಯುಗದಲ್ಲಿ ಅರ್ಥಮಾಡಿಕೊಳ್ಳಲು ಮತ್ತು ಪ್ರಯೋಗಕ್ಕೆ ತರಲು ಇತರೆ ಸಂಸ್ಕೃತಿಗಳ ಜನರು ಕಷ್ಟಪಡುತ್ತಿದ್ದಾರೆ. ಹೀಗಿರುವ ವಿಶ್ವವ್ಯಾಪಕವಾದ ಈ ಜೀವನದೃಷ್ಟಿಯನ್ನು ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಋಷಿಮುನಿಗಳು ಜಗತ್ತಿನ ಚಿಂತನಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದರು ಎನ್ನುವುದು ನಿಜಕ್ಕೂ ಹೆಮ್ಮೆಪಡುವಂಥ ವಿಷಯವಾಗಿದೆ.

ಈ ಜೀವನದೃಷ್ಟಿಯೇ ಭಾರತದ ಜೀವಾಳವಾಗಿದೆ, ಆತ್ಮವಾಗಿದೆ. ನಮ್ಮ ಸಂಸ್ಕೃತಿಯನ್ನು ಇದುವರೆಗೂ ಜೀವಂತವಾಗಿ ಇರಿಸಿರುವುದು ಅದೇ. ಶ್ರೀರಾಮಕೃಷ್ಣರು ಉದಾರವಾದ ಈ ಮನೋಭಾವನೆಯ ಹರಿಕಾರರಾಗಿದ್ದಾರೆ. ಎಲ್ಲ ಮತಗಳೂ ಭಗವಂತನ ಕಡೆಗೆ ನಮ್ಮನ್ನು ಕರೆದುಕೊಂಡು ಹೋಗುವ ಮಾರ್ಗಗಳು ಎಂಬ ಅವರ ಉಪದೇಶವಾಣಿಯು ಋಗ್ವೇದದ ಋಷಿಗಳು ನೀಡಿದ **ಏಕಂ ಸತ್ ವಿಪ್ರಾ ಬಹುಧಾ ವದಂತಿ** ಎಂಬ ಸಂದೇಶದ ಮಾರ್ದನಿಯೇ ಆಗಿದೆ. ಇದನ್ನು ಅವರು ನುಡಿದಿದ್ದು ಮಾತ್ರವಲ್ಲ, ತಮ್ಮ ಜೀವನದಲ್ಲಿ ಸಾಧಿಸಿ ತೋರಿಸಿರುವುದನ್ನು ನಾವು ಸ್ಪಷ್ಟವಾಗಿ ನೋಡುತ್ತೇವೆ. ಅವರು ಹಿಂದೂ ಧರ್ಮದ ವಿವಿಧ ಸಾಧನಾಪಥಗಳನ್ನು ಕ್ರಮಿಸಿ, ಸಿದ್ಧಿಯನ್ನು ಪಡೆದು ಅವುಗಳಲ್ಲಿ ಸಮನ್ವಯತೆಯನ್ನು ಸಾಧಿಸಿದರು. ಇದಲ್ಲದೆ ಇಸ್ಲಾಂ ಮತ್ತು ಕ್ರೈಸ್ತಧರ್ಮಗಳ ತಿರುಳೂ ಕೂಡ ಅದೇ ಆಗಿದೆ ಎನ್ನುವುದನ್ನು ತಮ್ಮ ಅನುಭವದ ಮೂಲಕ ತೋರಿಸಿಕೊಟ್ಟರು. ಹೀಗೆ ಭಾರತೀಯ ಸಂಸ್ಕೃತಿಯು ಯಾವ ಸಮನ್ವಯ ಆದರ್ಶವನ್ನು ಪ್ರತಿಪಾದಿಸುವುದೋ, ಅದರ ಪ್ರಾತ್ಯಕ್ಷಿಕ ರೂಪವನ್ನು ನಾವು ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶಗಳಲ್ಲಿ ನೋಡುತ್ತೇವೆ. ಒಟ್ಟಾರೆ ಶ್ರೀರಾಮಕೃಷ್ಣರು ಜೀವಂತ ಭಾರತೀಯ ಸಂಸ್ಕೃತಿಯ ರೂಪದಲ್ಲಿ ಕಂಗೊಳಿಸುತ್ತಾರೆ.

ಉಪನಿಷತ್ತುಗಳು ಜ್ಞಾನಮಾರ್ಗದ ಪ್ರವರ್ತನೆಯನ್ನು ಮಾಡುವ ಋಷಿಗಳ ಅನುಭವದ ದಾಖಲೆಗಳು. ಆ ಮಹನೀಯರ ಅದ್ವೈತ ಸಾಕ್ಷಾತ್ಕಾರದ ಹೊಳಪನ್ನು ಅಲ್ಲಿ ನಾವು ಕಾಣಬಹುದು. ಶ್ರೀರಾಮಕೃಷ್ಣರು ನಿಜವಾದ ದೃಷ್ಟಿಯಲ್ಲಿ ಈ ಉಪನಿಷತ್ತಿನ ಋಷಿಗಳಿಗೆ ಸರಿಸಮಾನವಾದ ಜೀವನವನ್ನು ಬಾಳಿದವರು. ಆ ಆದರ್ಶವನ್ನು ತಮ್ಮ ಜೀವನದಲ್ಲಿ ಸಾಕಾರಗೊಳಿಸಿದವರು; ಉಪನಿಷತ್ತುಗಳ ಆದರ್ಶವಾದ ಅದ್ವಿತೀಯ ನಿರ್ಗುಣ ಬ್ರಹ್ಮನ ಅನುಭೂತಿಯನ್ನು ನಿರ್ವಿಕಲ್ಪ ಸಮಾಧಿಯ ಮೂಲಕ ಪಡೆದುಕೊಂಡರು. ಹೀಗೆ ಶ್ರೀರಾಮಕೃಷ್ಣರು ಪ್ರಾಚೀನ ಉಪನಿಷತ್ತುಗಳ ಋಷಿಗಳ ಸಾಧನೆ-ಸಿದ್ಧಿಗಳನ್ನು ಈ ಆಧುನಿಕ ಯುಗದಲ್ಲಿ ಬಾಳಿದರು. ಆ ಮೂಲಕ ಭಾರತೀಯ ಸಂಸ್ಕೃತಿಯ ಅವಿನಾಶಿತ್ವದ ಸಂಕೇತವಾದರು.

### ಶ್ರೀರಾಮಕೃಷ್ಣರು ಮತ್ತು ಭಗವದ್ಗೀತೆ-ಪುರಾಣ-ಇತಿಹಾಸಗಳ ಸಂಸ್ಕೃತಿ

ವೇದಗಳ ನಂತರ ಭಾರತೀಯ ಸಂಸ್ಕೃತಿಯ ವಾಹಕಗಳಾಗಿದ್ದವು, ರಾಮಾಯಣ, ಮಹಾಭಾರತ, ಪುರಾಣಗಳು ಮತ್ತು ಮುಖ್ಯವಾಗಿ ಭಗವದ್ಗೀತೆ. ಶ್ರೀರಾಮ ಮತ್ತು ಶ್ರೀಕೃಷ್ಣರ ವ್ಯಕ್ತಿತ್ವಗಳು ನಮ್ಮ ಭಾರತೀಯ ಸಂಸ್ಕೃತಿಪುರುಷನ ಎರಡು ಕಣ್ಣುಗಳಿದ್ದಂತೆ ಎಂದು ಹೇಳಬಹುದು. ಹಿಂದೂ ಸಭ್ಯತೆಯ ಸಮಗ್ರ ಒಳನೋಟ ಈ ಇಬ್ಬರು ಅವತಾರಪುರುಷರ ಯಶೋಗಾಥೆಯಲ್ಲಿ ಕಾಣಸಿಗುತ್ತದೆ. ಇವರಿಬ್ಬರೂ ಮಾನವಜೀವಿತದ ಪರಮಾದರ್ಶವನ್ನು ತಮ್ಮ ವ್ಯಕ್ತಿತ್ವ ಮತ್ತು ನಡವಳಿಕೆಗಳಲ್ಲಿ ಪ್ರಕಟಗೊಳಿಸುತ್ತಾರೆ; ಮಾನವನು ಸಾಧಿಸಬಹುದಾದ, ಏರಬಹುದಾದ ನೈತಿಕ ಮತ್ತು ಆಧ್ಯಾತ್ಮಿಕ ಶಿಖರವನ್ನು ಅವರಿಬ್ಬರೂ ಪ್ರತಿನಿಧಿಸುತ್ತಾರೆ... ರಾಮನ ನೈತಿಕ ಹಾಗೂ ಆಧ್ಯಾತ್ಮಿಕ ಪರಿಪೂರ್ಣತೆ, ಕೃಷ್ಣನ ಕರ್ಮಯೋಗದ ಆದರ್ಶದ ಜೊತೆಗೆ ಮಿಳಿತವಾದ ಮಹಾನ್ ಚೇತನವೊಂದು ೧೯ನೆಯ ಶತಮಾನದಲ್ಲಿ ಒಡ ಮೂಡಿತು. ರಾಮನ ವ್ಯಕ್ತಿಗತ ಅಧ್ಯಾತ್ಮ ಮತ್ತು ಧರ್ಮಗಳು, ಶ್ರೀಕೃಷ್ಣನ ಸಮಷ್ಟಿಹಿತದ ಧ್ಯೇಯದೊಡನೆ ಈ ವ್ಯಕ್ತಿತ್ವದಲ್ಲಿ ಸಾಮರಸ್ಯವನ್ನು ಹೊಂದಿದವು. ಆ ಮಹಾಪುರುಷನ ಹೆಸರು ಕೂಡ ಈ ಎರಡೂ ಜ್ಯೋತಿಃಪುಂಜಗಳ ನಾಮಧೇಯಗಳನ್ನು ತನ್ನಲ್ಲಿ ಒಳಗೊಂಡಿತು. ಹೀಗೆ ಶ್ರೀರಾಮಕೃಷ್ಣ ಪರಮಹಂಸ ರೆಂಬ ನವಯುಗಾಚಾರ್ಯರ ಜೀವಿತದಲ್ಲಿ, ರಾಮ ಮತ್ತು ಕೃಷ್ಣರ ಆದರ್ಶ, ಧ್ಯೇಯ ಮತ್ತು ಸಾಧನೆಗಳು ಸಂಘಟಿತ ಗೊಂಡು, ಪ್ರಕಟಗೊಂಡವು. *(ಸಂಪಾದಕೀಯ : ವಿವೇಕಪ್ರಭ: ಮಾರ್ಚ್ ೨೦೧೧).*

**ರಾಮೋ ವಿಗ್ರಹವಾನ್ ಧರ್ಮಃ** – ಶ್ರೀರಾಮನು ಧರ್ಮದ ಪ್ರತಿರೂಪ. **ಕೃಷ್ಣಂ ವಂದೇ ಜಗದ್ಗುರುಂ** – ಶ್ರೀಕೃಷ್ಣನದು ಬಹುಮುಖ ವ್ಯಕ್ತಿತ್ವ. ಶ್ರೀಕೃಷ್ಣನ ಜೀವಿತದ ಸಾರಸರ್ವಸ್ವವನ್ನು ಆತನ ಭಗವದ್ಗೀತೆಯ ಸಂದೇಶದಲ್ಲಿ ನೋಡುತ್ತೇವೆ. ಶ್ರೀಕೃಷ್ಣನ ವ್ಯಕ್ತಿತ್ವ ಮತ್ತು ನಡವಳಿಕೆಗಳ ತಾತ್ತ್ವಿಕ ರೂಪವೇ ಗೀತೆ. ಶ್ರೀಕೃಷ್ಣನು ಬಾಳನ್ನು ಸಮಗ್ರವಾಗಿ ನೋಡಿದನು. ಅಭ್ಯುದಯವನ್ನು (ಲೌಕಿಕ ಪ್ರಗತಿ) ಸಾಧಿಸುತ್ತಲೇ, ನಿಶ್ರೇಯಸಕ್ಕಾಗಿಯೂ (ಪಾರಮಾರ್ಥಿಕ ಧ್ಯೇಯ) ಪ್ರಯತ್ನಪಡುವ ಯೋಗವನ್ನು ಅವನು ಬೋಧಿಸಿದನು. ವ್ಯಕ್ತಿಗತ ಧ್ಯೇಯಸಾಧನೆಯ ಜೊತೆ

ಜೊತೆಗೇ ಸಮಾಜ ಮತ್ತು ದೇಶಹಿತವನ್ನು ಸಾಧಿಸುವ ಸರ್ವಾಂಗೀಣ, ಪರಿಪೂರ್ಣ ಮತ್ತು ಸಮಗ್ರ ಜೀವನದೃಷ್ಟಿಯನ್ನು ಅವನು ಪ್ರತಿಪಾದಿಸಿದನು.

ಶ್ರೀರಾಮಕೃಷ್ಣರಲ್ಲಿ ಈ ಎರಡು ಮಹಾಪುರುಷರ ಜೀವನಾದರ್ಶಗಳು ಹಾಸುಹೊಕ್ಕಾಗಿರುವುದನ್ನು ನಾವು ನೋಡಬಹುದು. ರಾಮನ ಧರ್ಮಪ್ರಜ್ಞೆ ಅವರ ಜೀವನದ ಉಸಿರಾಗಿತ್ತು. ಅವರು ತಾವು ನಂಬಿದ್ದ ಧ್ಯೇಯಗಳಿಗಾಗಿ ತಮ್ಮ ಇಡೀ ಬಾಳನ್ನು ಬಾಳಿದರು. ಸತ್ಯನಿಷ್ಠೆ ಮತ್ತು ಪರಮ ಪ್ರಾಮಾಣಿಕತೆ ಎನ್ನುವುದು ಅವರ ವ್ಯಕ್ತಿತ್ವದಲ್ಲಿ ಬೇರೂರಿತ್ತು. ಹೀಗಾಗಿ ರಾಮನಂತೆಯೇ ರಾಮಕೃಷ್ಣರೂ ಧರ್ಮದ ಪ್ರತಿರೂಪ ಎಂದು ನಾವು ಧಾರಾಳವಾಗಿ ಹೇಳಬಹುದು. ಶ್ರೀಕೃಷ್ಣನಂತೆ ಶ್ರೀರಾಮಕೃಷ್ಣರೂ ಜಗದ್ಗುರು. ಸ್ವಾಮಿ ವಿವೇಕಾನಂದರು ಅವರನ್ನು **ಕರ್ಮಕಠೋರ್** — ಕರ್ಮವೀರರು ಎಂದು ಕರೆಯುತ್ತಾರೆ. ಶ್ರೀಕೃಷ್ಣನಂತೆ ಶ್ರೀರಾಮಕೃಷ್ಣರೂ ಕೂಡ ತಮ್ಮ ಕಾಲದ ಅವಶ್ಯಕತೆಗೆ ಅನುಗುಣವಾಗಿ ಧರ್ಮಸಂರಕ್ಷಣೆಯನ್ನು ಮಾಡಿದರು. ಹಿಂದೂಸಮಾಜದ ಜನಮಾನಸದಲ್ಲಿ ವಿಷವೃಕ್ಷದಂತೆ ಹಬ್ಬಿದ್ದ ಸಂಶಯರಾಕ್ಷಸನ ನಾಶವನ್ನು ಮಾಡಿದರು. ಇದು ಶ್ರೀಕೃಷ್ಣನು ದ್ವಾಪರಯುಗದಲ್ಲಿ ಮಾಡಿದ್ದ ದಿವ್ಯಕಾರ್ಯಕ್ಕಿಂತ ಎಳ್ಳಷ್ಟೂ ಕಡಮೆಯಾದದ್ದಲ್ಲ.

ಇದಲ್ಲದೆ ಶ್ರೀರಾಮಕೃಷ್ಣರು ಭಗವದ್ಗೀತೆಯ ಆದರ್ಶದ ಮೂರ್ತರೂಪರೂ ಆಗಿದ್ದಾರೆ. ಗೀತೆಯಲ್ಲಿ ಕಂಡುಬರುವ ನಿಷ್ಕಾಮಕರ್ಮ, ನಿರಾಸಕ್ತ ಭಾವನೆ, ಯಜ್ಞಭಾವನೆ, ಬುದ್ಧಿಯೋಗ, ಪ್ರೇಮಭಕ್ತಿ, ಧ್ಯಾನ, ದೈವೀಸಂಪತ್ತು ಮತ್ತು ಶರಣಾಗತಿ ಮುಂತಾದ ಆಧ್ಯಾತ್ಮಿಕ ಮೌಲ್ಯಗಳನ್ನು ಶ್ರೀರಾಮಕೃಷ್ಣರು ತಮ್ಮ ಆಧ್ಯಾತ್ಮಿಕ ಸಾಧನೆ ಮತ್ತು ಜೀವಿತದಲ್ಲಿ ಪರಿಪೂರ್ಣವಾಗಿ ಅಳವಡಿಸಿಕೊಂಡಿದ್ದರು. ಗೀತೆಯ ಸಾರಸರ್ವಸ್ವವಾದ ಭಕ್ತಿ, ಜ್ಞಾನ, ಕರ್ಮ ಮತ್ತು ಧ್ಯಾನಗಳ ಸಾಮರಸ್ಯವನ್ನು ಅವರ ಜೀವನ ಮತ್ತು ಬೋಧನೆಗಳಲ್ಲಿ ನಾವು ಕಾಣುತ್ತೇವೆ. ಹೀಗೆ ಶ್ರೀರಾಮಕೃಷ್ಣರು ಭಗವದ್ಗೀತೆಯ ಸಾಧನೆ-ಸಿದ್ಧಿಗಳ ಆದರ್ಶ ಪುರುಷರಾಗಿದ್ದಾರೆ.

ಇನ್ನು ಪುರಾಣಗಳು ಜಗದೀಶ್ವರನೇ ಪ್ರಧಾನವಾಗಿ ಉಳ್ಳ ಭಕ್ತಿಮಾರ್ಗವನ್ನು ಮುಖ್ಯವಾಗಿ ಉಪದೇಶಿಸುತ್ತವೆ. ಅನೇಕ ಬಗೆಯ ಆಧ್ಯಾತ್ಮಿಕ ಸಾಧನೆಗಳ ಮನೋಹರ ಗಾಥೆಯನ್ನು ನಾವು ಇಲ್ಲಿ ಕಾಣುತ್ತೇವೆ. ಶ್ರೀರಾಮಕೃಷ್ಣರ ಜೀವಿತವೂ ಪ್ರಾಚೀನ ಪುರಾಣಗಳಂತೆ ಅತಿ ಪವಿತ್ರವಾದುದು; ಅದೇ ಆದರ್ಶವನ್ನು ಎತ್ತಿ ಹಿಡಿಯುವಂಥದ್ದು. ಹೀಗಾಗಿ ಶ್ರೀರಾಮಕೃಷ್ಣರು ಪುರಾಣಗಳ ಆದರ್ಶಮೂರ್ತಿಯಾಗಿಯೂ ಕಂಗೊಳಿಸುತ್ತಾರೆ.

### ರಾಮಕೃಷ್ಣ ಭಾವಧಾರೆ ಮತ್ತು ಭಾರತೀಯ ಸಂಸ್ಕೃತಿ

ಶ್ರೀರಾಮಕೃಷ್ಣರ ಜೀವಿತ, ಆಧ್ಯಾತ್ಮಿಕ ದರ್ಶನ ಮತ್ತು ಸಿದ್ಧಿಗಳು ಹಾಗೂ ಉಪದೇಶಗಳೇ ರಾಮಕೃಷ್ಣಭಾವಧಾರೆ ಎನ್ನುವ ವಿಚಾರಧಾರೆಯ ಸ್ವರೂಪವನ್ನು ಪಡೆದುಕೊಂಡವು ಎಂಬುದನ್ನು ನಾವೀಗಾಗಲೇ ತಿಳಿದುಕೊಂಡಿದ್ದೇವೆ. ಅದೇ ರೀತಿಯಲ್ಲಿ ಈ ಭಾವಧಾರೆಯು ಹೇಗೆ ಭಾರತೀಯ ಸಂಸ್ಕೃತಿಯ ಅವಿನಾಭಾವ ಅಂಗವಾಗಿದೆ ಎಂಬುದನ್ನೂ ವಿಚಾರಮಾಡಿದೆವು. ಶ್ರೀರಾಮಕೃಷ್ಣರ ಈ ಸರ್ವಸಮನ್ವಯ ಉದಾರ ಭಾವಧಾರೆಯನ್ನೇ ವೇದಾಂತ ಎಂಬ ಹೆಸರಿನಲ್ಲಿ ಸ್ವಾಮಿ ವಿವೇಕಾನಂದರು ದೇಶವಿದೇಶಗಳಲ್ಲಿ ತಮ್ಮ ಪ್ರಖರ ವಾಗ್ಝರಿಯಿಂದ ಪ್ರಚಾರ ಮಾಡಿದರು. ಅವರು ಬೋಧಿಸಿದ ವೇದಾಂತವು ಒಂದು ಮತ, ಧರ್ಮ, ಜನಾಂಗ ಅಥವಾ ದೇಶಕ್ಕೆ ಸೀಮಿತವಾದುದಲ್ಲ. ಉಪನಿಷತ್ತುಗಳ ಚಿರನೂತನವಾದ ಸಂದೇಶವೇ ಅದು; ಪ್ರತಿಯೊಬ್ಬ ಜೀವಿಯಲ್ಲಿಯೂ ಇರುವ ಸುಪ್ತದಿವ್ಯತೆಯ ಉದ್ಘೋಷವದು. ರಾಮಕೃಷ್ಣ-ವಿವೇಕಾನಂದ ಭಾವಧಾರೆಯು ಉಪದೇಶಿಸುವುದು ಉಪನಿಷತ್ತುಗಳ ಋಷಿಗಳು ಬೋಧಿಸಿದ ಸಾರ್ವಕಾಲಿಕ ಸಂದೇಶದ ಮರುಧ್ವನಿಯೇ ಆಗಿದೆ. ಆ ಪ್ರಾಚೀನ ಚಿಂತನಧಾರೆಯನ್ನು ಆಧುನಿಕ ಕಾಲದ ಅವಶ್ಯಕತೆಗಳಿಗೆ ಪೂರಕವಾಗಿ, ವಿಶ್ವವ್ಯಾಪಕವಾಗಿ, ವಿಶ್ವಮಾನ್ಯವಾಗಿ ಸಾರ್ವತ್ರಿಕವಾಗಿ ಪ್ರಸ್ತುತಪಡಿಸಿರುವ ವಿನೂತನ ತತ್ತ್ವವೇ ರಾಮಕೃಷ್ಣ-ವಿವೇಕಾನಂದ ಭಾವಧಾರೆ. ಇದರ ಮೂಲಸೂತ್ರಗಳನ್ನು ಸ್ವಾಮೀಜಿ ಬಹಳ ಸ್ಪಷ್ಟವಾಗಿ ತಮ್ಮ ರಾಜಯೋಗದ ಅವತರಣಿಕೆಯಲ್ಲಿ ಸ್ಪಷ್ಟಪಡಿಸುತ್ತಾರೆ:

ಪ್ರತಿಯೊಂದು ಆತ್ಮನಲ್ಲಿಯೂ ದಿವ್ಯತೆ ಹುದುಗಿರುವುದು. ಈ ಸುಪ್ತವಾದ ದಿವ್ಯತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಪಡಿಸುವುದೇ ಜೀವನದ ಗುರಿ.

ಇದನ್ನು ಕರ್ಮಯೋಗದಿಂದಾಗಲಿ, ಭಕ್ತಿಯೋಗದಿಂದಾಗಲಿ, ರಾಜಯೋಗದಿಂದಾಗಲಿ, ಜ್ಞಾನಯೋಗದಿಂದಾಗಲಿ, ಯಾವುದಾದರೂ ಒಂದು ಮಾರ್ಗದಿಂದ ಅಥವಾ ಎಲ್ಲಾ ಮಾರ್ಗಗಳ ಸಂಯೋಗದಿಂದ ಆಗಲಿ ಸಾಧಿಸಿ ಮುಕ್ತರಾಗಿ.

ಇದೇ ಧರ್ಮದ ಸರ್ವಸ್ವ. ಸಿದ್ಧಾಂತ, ನಂಬಿಕೆ, ಬಾಹ್ಯಾಚಾರ, ಪವಿತ್ರ ಗ್ರಂಥ, ದೇವಸ್ಥಾನ, ವಿಗ್ರಹ — ಇವೆಲ್ಲ ಗೌಣ.

ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಂತರ್ಜಾಲದ ತಾಣದಲ್ಲಿ ಈ ವಿಷಯವನ್ನು ಬಹಳ ನಿರ್ದಿಷ್ಟವಾಗಿ ವಿವರಿಸಲಾಗಿದೆ. ಅದರ ಕೆಲವು ಅಂಶಗಳು ಹೀಗಿವೆ:

೧. ಭಾರತೀಯ ಸಂಸ್ಕೃತಿಯು ಐದುಸಾವಿರ ವರ್ಷಗಳಷ್ಟು ಪ್ರಾಚೀನವಾದುದು. ಅದು ಅಗಣಿತ ಆಂತರಿಕ ಭಿನ್ನತೆಗಳನ್ನು ಮತ್ತು ವಿದೇಶೀಯರ ಅನೇಕ ಬಾಹ್ಯ ದಾಳಿಗಳನ್ನು ಎದುರಿಸಿಯೂ ನಿರಂತರವಾಗಿ ಇಲ್ಲಿಯವರೆಗೂ ಉಳಿದುಕೊಂಡು ಬಂದಿದೆ. ಇದಲ್ಲದೆ ಬ್ರಿಟಿಷರ ೨೦೦ ವರ್ಷಗಳ ದಬ್ಬಾಳಿಕೆಯನ್ನೂ ಇದು ಸಮರ್ಥವಾಗಿ ಎದುರಿಸಿ ನಿಂತಿದೆ. ಇದು

ಸಾಧ್ಯವಾಗಿರುವುದು ಹಿಂದೂ ಧಾರ್ಮಿಕ ಸಂಪ್ರದಾಯದ ಆಧ್ಯಾತ್ಮಿಕ ಚೈತನ್ಯದಿಂದಲೇ. ಈ ಹಿಂದೂ ಧಾರ್ಮಿಕ ಸಂಪ್ರದಾಯವು ಬಹಳ ವಿಶಾಲವಾದುದು ಮತ್ತು ಸಂಕೀರ್ಣವಾದುದು. ಇದಕ್ಕೆ ಯಾವುದೇ ನಿರ್ದಿಷ್ಟ ಸಂಸ್ಥಾಪಕರಿಲ್ಲ; ಇಂಥದೇ ಎನ್ನುವ ಕಟ್ಟುಪಾಡಿಲ್ಲ ಮತ್ತು ಅಧಿಕಾರ ಕೇಂದ್ರವೂ ಇಲ್ಲ. ಇದು ತನ್ನ ಒಟ್ಟಾರೆ ಸಮಗ್ರತೆಯನ್ನು, ಜೀವಂತಿಕೆಯನ್ನು ಮತ್ತು ದೂರಗಾಮಿ ಪ್ರಭಾವವನ್ನು ಹೊಂದಿರುವುದು ಅದು ವೇದಾಂತ ಎನ್ನುವ ಕ್ರಿಯಾಶೀಲವಾದ ಜೀವನಾಧಾರಿತವಾದ ತತ್ತ್ವಜಿಜ್ಞಾಸೆಯ ಮೇಲೆ ಅವಲಂಬಿತವಾಗಿರುವುದರಿಂದ ಮಾತ್ರವೇ.

೨. ವೇದಾಂತವು ಒಂದು ಧಾರ್ಮಿಕ ಪಂಗಡವಲ್ಲ ಅಥವಾ ಕುರುಡುನಂಬಿಕೆಯೂ ಅಲ್ಲ. ಇಲ್ಲಿ ಭಗವಂತನ ಕೋಪಕ್ಕಾಗಲಿ, ಇತರೆ ಜನರ ದ್ವೇಷಕ್ಕಾಗಲಿ ಭಯಭೀತರಾಗುವ ಯಾವುದೇ ಕ್ಷುಲ್ಲಕ ವಿಚಾರಗಳಿಲ್ಲ. ವೇದಾಂತವು ಚಿರಂತನ ಮತ್ತು ಅನಂತವಾದ ಮಾನವಾತ್ಮದ ಕಾಲಾತೀತ ಅನ್ವೇಷಣೆಯ ದ್ಯೋತಕವಾಗಿದೆ. ನಮ್ಮ ಭಾರತೀಯ ಪ್ರಾಚೀನ ಋಷಿಮುನಿಗಳು ಜೀವನದ ರಹಸ್ಯ, ಸಾವಿನ ನಿಗೂಢತೆ ಮತ್ತು ಚೈತನ್ಯವಸ್ತುವಿನ ನಿಗೂಢತೆ ಇವುಗಳೆಲ್ಲವನ್ನೂ ಪ್ರಖರ ವಿಚಾರಕ್ಕೆ ಒಳಪಡಿಸಿದ್ದರ ಫಲಶ್ರುತಿಯೇ ಈ ವೇದಾಂತ ತತ್ತ್ವ.

೩. ಇದಲ್ಲದೆ ಭಾರತೀಯ ಋಷಿಮುನಿಗಳು ಯೋಗವೆಂದು ಕರೆಯಲ್ಪಡುವ ಆಂತರಿಕ ಏಕಾಗ್ರತೆಯ ವಿಧಾನವನ್ನು ಕಂಡುಹಿಡಿದರು. ಯೋಗದ ಮೂಲಕ ಅವರು ಪಡೆದುಕೊಂಡ ಅತೀಂದ್ರಿಯ ಜ್ಞಾನವು ಇಂದಿನವರೆಗೂ ಗುರು-ಶಿಷ್ಯ ಪರಂಪರೆಯ ಮೂಲಕ ಸಂಗ್ರಹಿತವಾಗಿದೆ. ಪರಂಪರಾಗತವಾಗಿ ಬಂದ ಈ ಜ್ಞಾನವೇ ಉಪನಿಷತ್ತುಗಳಲ್ಲಿ ಸಂಗ್ರಹವಾಗಿರುವುದು. ಈ ಉಪನಿಷತ್ತುಗಳ ಪರಿಕಲ್ಪನೆಗಳೇ ಮುಂದಿನ ಶತಮಾನಗಳಲ್ಲಿ ವೇದಾಂತ ತತ್ತ್ವದ ರೂಪವನ್ನು ಪಡೆದುಕೊಂಡವು. ಹೀಗೆ ವೇದಾಂತವೆಂದರೆ ಆಧ್ಯಾತ್ಮಿಕ ಜಗತ್ತಿನ ಚಿರಂತನ ಸತ್ಯಗಳು ಮತ್ತು ನಿಯಮಗಳೇ ಆಗಿವೆ. ಆಧುನಿಕ ವಿಜ್ಞಾನವು ಕಂಡುಹಿಡಿದ ಭೌತಿಕ ಜಗತ್ತಿನ ನಿಯಮಗಳು ಹೇಗೆ ಸಾರ್ವತ್ರಿಕವಾದುವೋ, ಹಾಗೆಯೇ ವೇದಾಂತವು ಉಪದೇಶಿಸಿದ ನಿತ್ಯ ಸತ್ಯಗಳು ಮತ್ತು ಆಧ್ಯಾತ್ಮಿಕ ಜಗತ್ತಿನ ನಿಯಮಗಳು ಕೂಡ ಸಾರ್ವತ್ರಿಕವಾಗಿವೆ ಮತ್ತು ವಿಶ್ವವ್ಯಾಪಕವಾಗಿವೆ.

೪. ಭಾರತೀಯ ಸಂಸ್ಕೃತಿಯ ಇನ್ನೊಂದು ವಿಶಿಷ್ಟ ಅಂಶವೆಂದರೆ ಇದರ ಧಾರ್ಮಿಕ ಸಹಿಷ್ಣುತೆ ಮತ್ತು ಸ್ವಾತಂತ್ರ್ಯ. ಇದು ನೂರಾರು ಮತಗಳು, ಚಿಂತನಾ ವಿಧಾನಗಳು ಮತ್ತು ವಿದೇಶೀ ಧರ್ಮಗಳನ್ನು ಕೂಡ ತನ್ನಲ್ಲಿ ಬೆಳೆಯಲು ಅವಕಾಶಮಾಡಿಕೊಟ್ಟಿದೆ. ಅವುಗಳೆಲ್ಲದರ ಉತ್ತಮ ಅಂಶಗಳನ್ನು ತನ್ನಲ್ಲಿ ಏಕೀಕರಣಗೊಳಿಸಿಕೊಂಡಿದೆ. ಇದಲ್ಲದೆ, ಮಹಾನುಭಾವರಾದ ಶ್ರೀಕೃಷ್ಣ, ಶಂಕರಾಚಾರ್ಯ ಮತ್ತು ಶ್ರೀಚೈತನ್ಯರು ಕಾಲಕಾಲಕ್ಕೆ ಅವತಾರವನ್ನು ಎತ್ತಿ, ಈ ಆಂತರಿಕ ಸಮಗ್ರೀಕರಣ ಪ್ರಕ್ರಿಯೆಗೆ ಉತ್ತೇಜನವನ್ನು ನೀಡಿದ್ದಾರೆ.

೫. ೧೯ನೆಯ ಶತಮಾನದ ಆದಿಭಾಗದಲ್ಲಿ ವೈಚಾರಿಕತೆ ಮತ್ತು ವಿಜ್ಞಾನಗಳನ್ನು ವೈಭವೀಕರಿಸುವ ಹಾಗೂ ಮತಪರಿವರ್ತನೆಯ ಮಹದೋತ್ಸಾಹವನ್ನು ಒಳಗೊಂಡ ಪಾಶ್ಚಾತ್ಯ ಸಂಸ್ಕೃತಿಯು ಭಾರತೀಯ ಸಂಸ್ಕೃತಿಗೆ ಒಂದು ದೊಡ್ಡ ಸವಾಲಾಗಿ ಪರಿಣಮಿಸಿತು. ಈ ನಾಡಿನ ಬುದ್ಧಿಜೀವಿಗಳು ಈ ಸಂಸ್ಕೃತಿಯ ಲೌಕಿಕ ಮೌಲ್ಯಗಳಾದ ವ್ಯಕ್ತಿಗತ ಸ್ವಾತಂತ್ರ್ಯ, ಸಾಮಾಜಿಕ ಸಮಾನತೆ ಮತ್ತು ನ್ಯಾಯಬುದ್ಧಿಗಳೆಡೆಗೆ ಆಕರ್ಷಿತರಾದರು. ಈ ಕಾಲಘಟ್ಟದಲ್ಲಿ ವೇದಾಂತವನ್ನು ಪುನರುಜ್ಜೀವನಗೊಳಿಸಿ, ಅದಕ್ಕೆ ಪಾಶ್ಚಾತ್ಯ ಸಂಸ್ಕೃತಿಯ ಉತ್ತಮ ಅಂಶಗಳನ್ನು ಸಮನ್ವಯಗೊಳಿಸಿ ಈ ಸವಾಲನ್ನು ಸಮರ್ಥವಾಗಿ ಸ್ವೀಕರಿಸಿದವರೆಂದರೆ ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು.

## ಉಪಸಂಹಾರ

ಇದು ಭಾರತೀಯ ಸಂಸ್ಕೃತಿಗೆ ಮತ್ತು ಧರ್ಮಕ್ಕೆ ರಾಮಕೃಷ್ಣ-ವಿವೇಕಾನಂದ ವಿಚಾರಧಾರೆಯು ನೀಡಿರುವ ಮಹೋತ್ತಮ ಕೊಡುಗೆ. ನಿಂತನೀರಾಗಿದ್ದ ಹಿಂದೂಧರ್ಮ ಮತ್ತು ಸಂಸ್ಕೃತಿಗಳಿಗೆ ಪ್ರಾಚೀನ ಉಪನಿಷತ್ತಿನ ವೇದಾಂತ ಭಾವಧಾರೆಯ ಅಮೃತಸಿಂಚನವನ್ನು ಗೈದು ಅದು ಮತ್ತೊಮ್ಮೆ ಪರಿಶುದ್ಧವಾಗಿ ತುಂಬು ಗಂಭೀರದಿಂದ ಉತ್ಸಾಹದಿಂದ ಹರಿಯುವಂತೆ ಮಾಡಿದುದೇ ರಾಮಕೃಷ್ಣ-ವಿವೇಕಾನಂದ ವಿಚಾರಧಾರೆ. ಹಾಗೆಂದು ಈ ವಿಚಾರಧಾರೆಯು ಭಾರತೀಯ ವಿಚಾರಧಾರೆಗಿಂತ ಯಾವರೀತಿಯಲ್ಲಿಯೂ ಭಿನ್ನವಲ್ಲ. ಅದಕ್ಕೆ ಬದಲಾಗಿ, ತನ್ನೆಲ್ಲ ಸಂಕುಚಿತತೆಗಳನ್ನೂ ಕಳೆದುಕೊಂಡು, ಪರಿಶುದ್ಧವಾಗಿ, ವಿಶ್ವಮಾನ್ಯವಾಗಿ ಬೆಳಗುತ್ತಿರುವ ಭಾರತೀಯ ಸಂಸ್ಕೃತಿಯ ನೂತನ ಮಹದವತಾರವೇ ರಾಮಕೃಷ್ಣ-ವಿವೇಕಾನಂದ ವಿಚಾರಧಾರೆ.

ಇದು ರೂಪುಗೊಂಡು ರಾಮಕೃಷ್ಣ ಮಹಾಸಂಘವೆಂಬ ಸಾಂಸ್ಥಿಕ ರೂಪದಲ್ಲಿ ಹೆಮ್ಮರದ ಹಾಗೆ ಈಗ ಬೆಳೆದುನಿಂತಿದೆ. ರಾಮಕೃಷ್ಣ ವಿಚಾರಧಾರೆಯ ಸ್ಥೂಲರೂಪವೇ ವಿಶ್ವದಾದ್ಯಂತ ತನ್ನ ನೂರಾರು ಶಾಖೆಗಳ ರೂಪದಲ್ಲಿ ಬೆಳೆದುನಿಂತ ರಾಮಕೃಷ್ಣ ಮಹಾಸಂಘ. ಈ ವಿಚಾರಧಾರೆಯ ಆತ್ಮರೂಪರೇ ದಿವ್ಯತ್ರಯರಾದ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು — ಇವರ ಜೀವನ ಮತ್ತು ಉಪದೇಶಗಳು. ಇದಕ್ಕೆ ಪ್ರೇರಣಾದಾಯಕವಾಗಿರುವುದೇ ಐದುಸಾವಿರ ವರ್ಷಗಳಿಂದ ನಿರಂತರವಾಗಿ ಹರಿಯುತ್ತಿರುವ ಭಾರತೀಯ ಸಂಸ್ಕೃತಿಯೆಂಬ ಈ ದಿವ್ಯ ಆಧ್ಯಾತ್ಮಿಕ ಗಂಗೆ.